ಒಮ್ಮೆ ಎ.ಎಂ. ಮದರಿ ಅವರು ಬ್ಯಾಂಕಿನಲ್ಲಿ ಸಾಲ ಕೇಳಲು ಹೋದಾಗ ಅಲ್ಲಿನ ಮ್ಯಾನೇಜರ್, 'ನಿಮ್ಮ ಊರು ಯಾವುದು?' ಎಂದು ಕೇಳುತ್ತಾರೆ. ಇವರು, ಶೈಕ್ಷಣಿಕ ದಾಖಲೆಗಳಲ್ಲಿ ಇರುವಂತೆ 'ಹೊಳೆ ಆಲೂರು' ಎನ್ನುತ್ತಾರೆ. ಇಬ್ಬರ ನಡುವೆ ಸ್ವಲ್ಪ ಮಾತುಕತೆ ಆದ ನಂತರ ಮ್ಯಾನೇಜರ್ 'ಎಲ್ಲಿಯೂ ಆಸ್ತಿ ಇಲ್ಲ ಎನ್ನುತ್ತೀರಿ. ಯಾವುದೂ ಆಸ್ತಿ ಇರದಿದ್ದರೆ ಒಂದು ಊರಿನವರು ಹೇಗಾಗುತ್ತೀರಿ?' ಎಂದು ಕೇಳುತ್ತಾರೆ. ಅದಕ್ಕೆ ಮದರಿಯವರು, 'ನೋಡ್ರಿ ನಿಮ್ಮ ಆಲೋಚನೆಯ್ಹಂಗ ನಾನ ಹೊಂಟರ ನಾನ ಈ ದೇಶದವ್ನ ಅಲ್ಲಾಗತ್ತ. ನನ್ನ ಪಗಾರದ ಮ್ಯಾಲ ಸಾಲಾ ಕೇಳಾಕತ್ತೀನಿ. ಕೊಡಾಕ ಸಾಧ್ಯ ಇದ್ರ ಕೊಡ್ರಿ' ಅನ್ನುತ್ತಾರೆ. ಮುಂದುವರೆದು ಮದರಿಯವರು ಬರೆಯುತ್ತಾರೆ, '...ಇನ್ನು ಮೂರು ನಾಲ್ಕು ತಿಂಗಳಲ್ಲಿ ನಿವೃತ್ತಿಯಾಗುತ್ತೇನೆ, ಯಾವ ಊರು ಎನ್ನುವ ಪ್ರಶ್ನೆ ನಾನು ಎದುರಿಸಬೇಕಾಗಿದೆ... ನನ್ನ ಕೊನೆಯ ನಿಲ್ದಾಣ ಯಾವುದೋ ಕಾಲಕ್ಕೆ ಗೊತ್ತು. ನಿಮ್ದು ಯಾವೂರು? ಎಂಬ ಪ್ರಶ್ನೆ ಎದುರಾದಾಗಲೆಲ್ಲ ಬಹಳ ಹಿಂಸೆಯಾಗುತ್ತದೆ. ನಮ್ಮ ಶಂಕರ ಕಾಕಾ ಹಗಲೆಲ್ಲ ಹಾಡುತ್ತಿದ್ದ ಪದದ ಸಾಲು ನೆನಪಾಗುತ್ತದೆ: ಯಾವೂರೆಂದರೇನು ಹೇಳಲಿ/ ನಗೆ ಬರುತದೆನಗೆ/ ಯಾವೂರೆಂದರೇನು ಹೇಳಲಿ' – ಹೀಗೆ ಮದರಿಯವರ ಆತ್ಮಕತೆ 'ಗೊಂದಲಿಗ್ಯಾ' ಕೊನೆಗೊಳ್ಳುತ್ತದೆ. ಹೃದಯದ ಮೇಲೆ ನಿಗಿನಿಗಿ ಕೆಂಡ ಸುರಿದಂತಹ ಈ ನೋವು ಒಬ್ಬ ವ್ಯಕ್ತಿಗೆ, ಒಂದು ಸಮುದಾಯಕ್ಕೆ ಮಾತ್ರ ಆಗುತ್ತಿರುವಂಥದ್ದಲ್ಲ, ಇಡೀ ವಿಶ್ವಜೀವಕ್ಕೇ ಆಗುತ್ತಿರುವ ನೋವು. ಇದನ್ನು ಅರಿಯದ ತನಕ ಸಮಾಜ ಆರೋಗ್ಯವಂತವಾಗಲಾರದು. ಹೊಟ್ಟೆಪಾಡಿಗಾಗಿ ಊರೂರು ಅಲೆಯುತ್ತಾ ತಿರುಗುವ 'ಗೊಂದಲಿಗ' ಸಮುದಾಯಕ್ಕೆ ಸೇರಿದ ಎ.ಎಂ. ಮದರಿ ಅವರು ನೂರಾರು ಸಂಕಷ್ಟಗಳನ್ನು ದಿಟ್ಟವಾಗಿ ಎದುರಿಸಿ ಶಿಕ್ಷಣ ಪಡೆದು, ಪದವೀಧರರಾಗಿ, ಜಿಲ್ಲಾ ಖಜಾನಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ತಮ್ಮ ಬದುಕು ಮತ್ತು ಸಮುದಾಯದ ಕೋಟಲೆಗಳನ್ನು 'ಗೊಂದಲಿಗ್ಯಾ' ಆತ್ಮಕತೆಯಲ್ಲಿ ದಾಖಲಿಸಿದ್ದಾರೆ. ಇವರ ಅನುಭವಗಳ ಮೂಲಕ ಇಡೀ ಸಮುದಾಯವೇ ಮಾತನಾಡುವ ಈ ಕೃತಿಯು ಕನ್ನಡದ ಮಾದರಿ ಆತ್ಮಕಥಾನಕವಾಗಿದೆ. ಇದನ್ನು ಪ್ರಕಟಿಸಿ, ಮರುಮುದ್ರಣಗಳನ್ನು ಮಾಡಿ, ನೂರಾರು ಜನರಿಗೆ ತಲುಪಿಸುವಲ್ಲಿ ಲೋಹಿಯಾ ಪ್ರಕಾಶನದ ಚನ್ನಬಸವಣ್ಣನವರ ಪಾತ್ರ ಮುಖ್ಯವಾದದ್ದು. ಮದರಿ ಅವರೊಡನೆ 'ಮಯೂರ'ಕ್ಕಾಗಿ ನಡೆಸಿದ ಸಂದರ್ಶನ ಇಲ್ಲಿದೆ.



**◆ ನಿಮ್ಮ ಊರು, ನಿಮ್ಮ ಸಮುದಾಯದ ಬಗ್ಗೆ ಹೇಳಿ.**

ನನ್ನ ಹೆಸರು ಅಪ್ಪಣ್ಣ ಅಂತ. ಮದರಿ ಅನ್ನೋದು ನಾನು ಹುಟ್ಟಿದ ಊರು, ಬಿಜಾಪುರ ಜಿಲ್ಲೆಯೊಳಗ ಒಂದು ಸಣ್ಣ ಹಳ್ಳಿ ಇದು. ನಮ್ದು 'ಗೊಂದಲಿಗ' ಅನ್ನೋ ಅಲೆಮಾರಿ ಸಮುದಾಯ. ನಮ್ಮ ಮನೆತನದ ಮೂಲಸ್ಥಳ ಮಹಾರಾಷ್ಟ್ರ. ಆದ್ದರಿಂದ ನನ್ನ ಮತ್ತು ನಮ್ಮ ಸಮುದಾಯದ ಮನೆಮಾತು ಮರಾಠಿ. ಬಹಳ ಕಾಲದ ಹಿಂದೆ ನಮ್ಮ ಪೂರ್ವಜರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದು ಇಲ್ಲೇ ನೆಲೆಸಿದ್ದಾರ್ರಿ. ಸ್ವಲ್ಪ ಕಾಲಾನಂತರ ನಮ್ಮ ಕುಟುಂಬ